2016 ಕ.ತೀ.ವ 118

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

### ಶ್ರೀ ಹನುಮಂತಪ್ಪ –ವಿರುದ್ಧ– ಶ್ರೀ ಬಿ.ವಿ. ಶಿವಕುಮಾರ್ ಮತ್ತು ಇತರರು*

ಮೋಟಾರು ವಾಹನಗಳ ಅಧಿನಿಯಮದ 173(1)ರ ಅಡಿಯಲ್ಲಿ ಎಂಎಫ್ಎ ನ್ನು ದಾಖಲು ಮಾಡಲಾಗಿದೆ.

ಎದುರು ಆಕ್ಷೇಪಣೆಯನ್ನು ಸಲ್ಲಿಸಿರುವ ವಿಮಾ ಕಂಪನಿಯು ಮೋಟಾರು ವಾಹನ ಅಧಿನಿಯಮದ 147ನೇ ಪ್ರಕರಣದ ಪರಂತುಕಗಳ ಅನುಸಾರ ತಾನು ಕೇವಲ 1,32,424/–ರೂ.ಗಳನ್ನು ಮಾತ್ರ ಸಂದಾಯ ಮಾಡಲು ಹೊಣೆಗಾರನಾಗಿದ್ದು ಹೆಚ್ಚುವರಿ ಮೊತ್ತವನ್ನು ಲಾರಿಯ ಮಾಲೀಕನಿಂದ ವಸೂಲಿ ಮಾಡಲು ಎದುರು ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ.

ವಾದ ವಿವಾದಗಳನ್ನು ಆಲಿಸಿದ ನ್ಯಾಯಾಲಯವು ವಿಮಾ ಪ್ರೀಮಿಯಂ ಅನ್ನು ವಾಹನದ ಮೂಲ ಮೂರನೇ ಪಕ್ಷಕಾರನಿಗೆ ಹಾಗೂ ಚಾಲಕನಿಗೆ ಮಾತ್ರವೇ ಪಾವತಿಸಿರುವುದು ಪಾಲಿಸಿಯಲ್ಲಿ ಕಂಡು ಬಂದ ಕಾರಣದಿಂದ ಇಬ್ಬರೂ ಅಪೀಲುದಾರರ ವಾದಗಳನ್ನು ಭಾಗಶಃ ಎತ್ತಿ ಹಿಡಿದಿದೆ.

ನ್ಯಾಯಾಧಿಕರಣದ ತೀರ್ಪು ಮತ್ತು ಐತೀರ್ಪನ್ನು ಅದಕ್ಕನುಸಾರವಾಗಿ ಮಾರ್ಪಾಡುಗೊಳಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 2005 ಸನ್ಯಾಪ್ರ 172*
*ರಾಷ್ಟ್ರೀಯ ವಿಮಾ ಕಂಪನಿ ಲಿಮಿಟೆಡ್ –ವಿರುದ್ಧ–*
*ಪ್ರೇಮಾಬಾಯಿ ಪಟೇಲ್ ಮತ್ತು ಇತರರು (ಉಲ್ಲೇ) 21*

*ಎಂ.ಎಫ್.ಎ. ಸಂಖ್ಯೆ: 8704/2009(ಎಂವಿ) ಇದರೊಂದಿಗೆ ಇತರೆ, ದಿನಾಂಕ: 9ನೇ ಮಾರ್ಚ್, 2015.

*2. ಐಎಲ್ಆರ್ 2003 ಕೆಎಆರ್ 3538*
*ಶ್ರೀಮತಿ ಭೀಮವ್ವ ಮತ್ತು ಇತರರು –ವಿರುದ್ಧ–*
*ಶಂಕರ್ ಆಲಿಯಾಸ್ ಆಧ್ಯಾ ಮತ್ತು ಇತರರು (ಉಲ್ಲೇ) 26*

ಅರ್ಜಿದಾರರ ಪರ : ಶ್ರೀ ಎನ್. ಗೋಪಾಲಕೃಷ್ಣ, ವಕೀಲರು;
ಪ್ರತ್ಯರ್ಜಿದಾರರ ಪರ: 1ನೇ ಪ್ರತ್ಯರ್ಜಿದಾರರ ಪರವಾಗಿ ಎಚ್.ಎಸ್.
2ನೇ ಪ್ರತ್ಯರ್ಜಿದಾರರ ಪರವಾಗಿ ಶ್ರೀ ಎ.ಎನ್.ಕೃಷ್ಣಸ್ವಾಮಿ, ವಕೀಲರು
3ನೇ ಪ್ರತ್ಯರ್ಜಿದಾರರನ್ನು ವಜಾ ಮಾಡಲಾಗಿದೆ.
4ನೇ ಪ್ರತ್ಯರ್ಜಿದಾರರ ಪರವಾಗಿ ಶ್ರೀ ಹೆಚ್.ಎನ್. ಕೇಶವ ಪ್ರಶಾಂತ, ವಕೀಲರು

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ಈ ಅಪೀಲು ಮತ್ತು ಎದುರು ಆಕ್ಷೇಪಣೆಯು, ಎಂ.ವಿ.ಸಿ 1795/2008ರಲ್ಲಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ–V ಲಘು ವ್ಯಾಜ್ಯಗಳ ನ್ಯಾಯಾಲಯ, ಬೆಂಗಳೂರು ಇವರು ದಿನಾಂಕ 3.11.2009ರಂದು ನೀಡಿದ ತೀರ್ಪು ಮತ್ತು ಐತೀರ್ಪು ಕಾರಣದಿಂದ ಉದ್ಭವಿಸಿದೆ. ಎಂಎಫ್ಎ 8704/2009ನ್ನು ಕ್ಲೇಮುದಾರ ಹನುಮಂತಪ್ಪ ಮತ್ತು ಎಂಎಫ್ಎ ಸಿಆರ್ಒಬಿ 106 ಸಂ.ಕೆಎ 40 –1254 ಹೊಂದಿದ ಲಾರಿಯ ವಿಮಾದಾರ ಮೆ॥ ಬಜಾಜ್ ಅಲಿಯನ್ಸ್, ಜನರಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ನಿಂದ ದಾಖಲು ಮಾಡಲಾಗಿದೆ.

2. ಕ್ಲೇಮುದಾರನು, ಕ್ಲೀನರ್‌ರಾಗಿ ಕೆಲಸ ಮಾಡುತ್ತಿದ್ದ ಕೆಎ 40–1254 ಸಂಖ್ಯೆಯನ್ನು ಹೊಂದಿದ, ಲಾರಿಯಲ್ಲಿ ಪ್ರಯಾಣಿಸುತ್ತಿದ್ದಾಗ ದಿನಾಂಕ 14.1.2008ರಂದು ಸುಮಾರು ಬೆಳಗಿನ ಜಾವ 2.00 ರಲ್ಲಿ ಸಂಭವಿಸಿದ ರಸ್ತೆ ಸಂಚಾರ ಅಪಘಾತದಲ್ಲಿ ಕ್ಲೇಮುದಾರನಿಗೆ ಗಾಯಗಳು ಉಂಟಾಗಿದ್ದವು. ಹಾಗಾಗಿ ಅವನು, ಪರಿಹಾರ ಕೋರಿ ನ್ಯಾಯಾಧಿಕರಣದ ಮುಂದೆ ಮೋಟಾರು ವಾಹನಗಳ ಅಧಿನಿಯಮದ 166ನೇ ಪ್ರಕರಣದ ಅಡಿಯಲ್ಲಿ ಕ್ಲೇಮು ಅರ್ಜಿಯನ್ನು ದಾಖಲು ಮಾಡಿದ್ದನು.

ನ್ಯಾಯಾಧಿಕರಣವು, ವಾರ್ಷಿಕ 6% ರಂತೆ ಬಡ್ಡಿಯೊಂದಿಗೆ 3,24,400/– ರೂ.ಗಳ ಪರಿಹಾರ ನೀಡಿತು ಮತ್ತು ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಕ್ಲೇಮುದಾರನಿಗೆ ಪರಿಹಾರ ಸಂದಾಯ ಮಾಡುವಂತೆ ಕೆಎ–40–1254– ಹೊಂದಿದ ಅಪರಾಧ ವಾಹನದ ಮಾಲೀಕ ಮತ್ತು ವಿಮಾದಾರನಿಗೆ ನಿರ್ದೇಶಿಸಲಾಗಿದೆ. ಅದರಿಂದ ಬಾಧಿತನಾಗಿ ಪ್ರಸ್ತುತ ಅಪೀಲು ಮತ್ತು ಎದುರು ಆಕ್ಷೇಪಣೆಯನ್ನು ದಾಖಲು ಮಾಡಲಾಗಿದೆ.

3. ಕ್ಲೇಮುದಾರನ ಪ್ರಕಾರ, ಈ ಎರಡೂ ವಾಹನಗಳು ಅಂದರೆ, ಸಂಖ್ಯೆ ಕೆಎ–40–1254 ಹೊಂದಿದ ಲಾರಿ ಮತ್ತು ಸಂ.ಓಆರ್02–ಬಿ–4520 ಹೊಂದಿದ ಟಿಪ್ಪರ್ ಲಾರಿ ಅಪಘಾತದಲ್ಲಿ ಪಾಲ್ಗೊಂಡಿವೆ ಮತ್ತು ಅಪಘಾತದಲ್ಲಿ ಗಾಯಗಳು ಉಂಟಾಗಿರುವುದಾಗಿ ಅವನು ಹೇಳಿದ್ದಾನೆ ಹಾಗೂ ಉಂಟಾದ ತೀವ್ರ ದೈಹಿಕ ಅಂಗವೈಕಲ್ಯತೆಯು ಅವನ ಭವಿಷ್ಯತ್ತಿನ ಗಳಿಕೆಗಳಿಗೆ ಅಡ್ಡಿಯಾಗಿದೆ. ಚಿಕಿತ್ಸೆಯ ಸಲುವಾಗಿ ಸಾಕಷ್ಟು ಮೊತ್ತವನ್ನು ಖರ್ಚು ಮಾಡಿರುವುದಾಗಿ ಅವನು ಹೇಳಿದ್ದಾನೆ. ಶ್ರೀ ಶಿವಕುಮಾರ್, ಕೆಎ–40–1254 ಹೊಂದಿದ ಸದರಿ ಲಾರಿಯ ಮಾಲೀಕನಾಗಿದ್ದಾನೆ ಮತ್ತು ಮೆ॥ ಬಜಾಜ್ ಅಲಿಯನ್ಸ್ ಜನರಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್, ಸದರಿ ಲಾರಿಯ ವಿಮಾದಾರನಾಗಿದ್ದಾನೆ. ಗೋವಿಂದರಾಜ್, ಓಆರ್–02–ಬಿ–4520 ಹೊಂದಿದ ಟಿಪ್ಪರ್ ಲಾರಿಯ ಮಾಲೀಕನಾಗಿದ್ದಾನೆ ಮತ್ತು ಮೆ॥ ಐಸಿಐಸಿಐ ಲಾಂಬರ್ಡ್, ಸದರಿ ಟಿಪ್ಪರ್ ಲಾರಿಯ ವಿಮಾದಾರನಾಗಿದ್ದಾನೆ.

4. ನ್ಯಾಯಾಧಿಕರಣದ ಮುಂದೆ, 2ನೇ ಪ್ರತ್ಯರ್ಜಿದಾರ ಬಜಾಜ್ ಅಲಿಯನ್ಸ್ ಎಲ್ಲಾ ವಿಷಯ ಸಾಮಗ್ರಿಯಲ್ಲಿನ ಎಲ್ಲಾ ದೃಢೋಕ್ತಿಗಳನ್ನು ಅಲ್ಲಗಳೆದು ವಿವರವಾದ ಲಿಖಿತ ಹೇಳಿಕೆಯನ್ನು ದಾಖಲು ಮಾಡಿದ್ದಾನೆ ಮತ್ತು ಸದರಿ ಅಪಘಾತದಲ್ಲಿ ಈ ಲಾರಿಯು ಒಳಗೊಂಡುದರಿಂದ ಗಾಯಗಳು ಉಂಟಾಗಿದೆಯೆಂಬುದನ್ನು ರುಜುವಾತುಪಡಿಸಲು ಅರ್ಜಿದಾರನಿಗೆ ಸವಾಲೆಸೆದಿದ್ದಾನೆ. ಏನೇ ಇದ್ದಲ್ಲಿ, ಅದರ ಸರಿಯಾದ ಹೊಣೆಗೆ ಬಾಧಕವಾಗದಂತೆ, ನಿರ್ಬಂಧಿಸಬಹುದಾಗಿದೆಯೆಂದು ನಿರ್ದಿಷ್ಟವಾಗಿ ಒತ್ತಿಹೇಳಲಾಗಿದೆ. ಟಿಪ್ಪರ್ ಲಾರಿಯ ಮಾಲೀಕನಾದ 3ನೇ ಪ್ರತ್ಯರ್ಜಿದಾರನು, ಎಲ್ಲಾ ದೃಢೋಕ್ತಿಗಳು ಮತ್ತು ಸದರಿ ಟಿಪ್ಪರ್ ಲಾರಿಯ

ಚಾಲಕನ ಮೇಲೆ ಹೊರಿಸಲಾದ ನಿರ್ದಿಷ್ಟತೆಯನ್ನು ಅಲ್ಲಗಳೆದಿದ್ದಾನೆ. 4ನೇ ಪ್ರತ್ಯರ್ಜಿದಾರನು, ಎಲ್ಲಾ ದೃಢೋಕ್ತಿಗಳನ್ನು ಅಲ್ಲಗಳೆದ ವಿವರವಾದ ಲಿಖಿತ ಹೇಳಿಕೆಯನ್ನು ಸಹ ದಾಖಲು ಮಾಡಿದ್ದಾನೆ.

5. ಪಕ್ಷಕಾರರ ವಾದ ಪ್ರತಿವಾದಗಳ ಆಧಾರದ ಮೇಲೆ, ಈ ಮುಂದಿನ ವಿವಾದಾಂಶಗಳನ್ನು ನ್ಯಾಯಾಧಿಕರಣದಿಂದ ರೂಪಿಸಲಾಗಿದೆ:

ಎ) ದಿನಾಂಕ 14.1.2008ರಂದು ಎಸ್‌ಆರ್‌ಎಸ್ ಬಸ್ ನಿಲ್ದಾಣದಲ್ಲಿ ಸುಮಾರು ಬೆಳಗಿನ ಜಾವ 2.00 ರಲ್ಲಿ ಬೆಂಗಳೂರು–ತುಮಕೂರು ರಸ್ತೆಯಲ್ಲಿ ಅಪಘಾತ ನಡೆದಿದೆ ಮತ್ತು ಅದರಿಂದ ಗಾಯಗಳು ಉಂಟಾಗಿದ್ದು, ಆಪಾದಿಸಲಾದಂತೆ, ನೋಂದಣಿ ಸಂ.ಕೆ–40–1254 ಹೊಂದಿದ್ದ ಲಾರಿಯ ಚಾಲಕನ ತೀವ್ರ ನಿರ್ಲಕ್ಷ್ಯ ಮತ್ತು ನೋಂದಣಿ ಸಂ.ಓಆರ್–02–4520 ಹೊಂದಿದ ಟಿಪ್ಪರ್ ಚಾಲಕನ ಕಡೆಯಿಂದ ಕ್ರಮಾರ್ಹ ನಿರ್ಲಕ್ಷ್ಯದ ಕಾರಣದಿಂದ ಆಗಿದೆ ಎಂಬುದನ್ನು ಅರ್ಜಿದಾರನು ರುಜುವಾತುಪಡಿಸಿದ್ದಾನೆಯೇ?

ಬಿ) ಹಾಗಿದ್ದಲ್ಲಿ ಅರ್ಜಿದಾರನು, ಎಷ್ಟು ಮತ್ತು ಯಾರಿಂದ ಪರಿಹಾರಕ್ಕೆ ಹಕ್ಕುಳವನಾಗಿದ್ದಾನೆ?

ಸಿ) ಆದೇಶ ಏನು?

6. ಕ್ಲೇಮುದಾರ/ಅರ್ಜಿದಾರನನ್ನು, ಪ್ರಾ.ಸಾ.1 ರಂತೆ ಸ್ವತಃ ವಿಚಾರ ಮಾಡಲಾಗಿದೆ ಮತ್ತು ವೈದ್ಯರಾದ ಎಸ್. ರಾಜಣ್ಣರನ್ನು ಪ್ರಾ.ಸಾ.2 ರಂತೆ ವಿಚಾರಣೆ ಮಾಡಲಾಗಿದೆ ಹಾಗೂ 14 ದಸ್ತಾವೇಜುಗಳನ್ನು ಅರ್ಜಿದಾರನ ಪರವಾಗಿ ನಿಶಾನೆ ಪಿ.1 ರಿಂದ 14ರ ವರೆಗೆ ಗುರುತು ಮಾಡಲಾಗಿದೆ. ಬಜಾಜ್ ಆಲಿಯನ್ಸ್ ಅಧಿಕೃತ ಪ್ರತಿನಿಧಿಯಾದ ಶ್ರೀ ಕೃಷ್ಣ ಶ್ರೀನಾಲಿಯನ್ನು, ಪ್ರಾ.ಸಾ. 1 ರಂತೆ ವಿಚಾರಣೆ

ಮಾಡಲಾಗಿದೆ ಹಾಗೂ ವಿಮಾ ಪಾಲಿಸಿಯನ್ನು ನಿಶಾನೆ ಆರ್.1 ರಂತೆ ಗುರುತು ಮಾಡಲಾಗಿದೆ.

7. ನ್ಯಾಯಾಧಿಕರಣದ ಮಾನ್ಯ ನ್ಯಾಯಾಧೀಶರು, ಕ್ಲೇಮುದಾರನು, ಕ್ಲೀನರ್‌ಆಗಿ ಪ್ರಯಾಣಿಸುತ್ತಿದ್ದಾಗ ಲಾರಿಯ ಚಾಲಕನ ಕಡೆಯಿಂದ ಮಾಡಿದ ನಿರ್ಲಕ್ಷ್ಯತೆಯ ಏಕೈಕ ಕಾರಣದಿಂದ ಅಪಘಾತ ಸಂಭವಿಸಿದೆ ಮತ್ತು ಬಡ್ಡಿಯೊಂದಿಗೆ 3,24,400/– ರೂಪಾಯಿಗಳ ಪರಿಹಾರ ನೀಡಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ.

8. ಕ್ಲೇಮುದಾರನಿಗೆ, ಕಿಬ್ಬೊಟ್ಟೆಯ ರಾಮಿ ಮೇಲಿನ ಮುರಿತದೊಂದಿಗೆ ಬಲ ಮೊಳಕಾಲು ಮೂಳೆಯ ಮುರಿತದೊಂದಿಗೆ ಸೊಂಟದ ಕೀಲು ತಪ್ಪಿದ್ದು, ಎಡಭಾಗದ ಹಿಂದುಗಡೆಯ ತೊಡೆ ಎಲುಬು ಮತ್ತು ಎಡ ಎಲುಬಿನ ಕುಳಿಯ ಮುರಿತದೊಂದಿಗೆ ಕೆಳಗಿನ ಕಿಬ್ಬೊಟ್ಟೆಯ ರಾಮಿಯ ಮುರಿತದೊಂದಿಗೆ ಅಂದರೆ ಅನೇಕ ಮುರಿತಗಳು ಉಂಟಾಗಿತ್ತು. ಕೂಡಲೇ ಅವನನ್ನು ದಿನಾಂಕ 14.1.2008ರಿಂದ 11.2.2008ರ ವರೆಗೆ ಅವನನ್ನು ಒಳರೋಗಿಯಾಗಿ ಬೌರಿಂಗ್ ಆಸ್ಪತ್ರೆಗೆ ಸೇರಿಸಲಾಗಿದೆ. 1) ಎಡ ತೊಡೆಯ ಮೇಲೆ ಪ್ರಸ್ತುತ ವಿಕಾರದ ಊತ, ಚಲನಸ್ಥಿತಿ 2) ಬಲತೊಡೆ ಮತ್ತು ಬಲಗಾಲಿನ ಮೇಲಿನ ಊತ, ಚಲನಸ್ಥಿತಿ ಪ್ರಸ್ತುತ ವಿಕಾರವಾಗಿ ಅವನಿಗೆ ಉಂಟಾಗಿದೆಯೆಂಬುದನ್ನು ನಿಶಾನೆ. ಪಿ.5 ಗಾಯದ ಪ್ರಮಾಣಪತ್ರ ಬಹಿರಂಗಪಡಿಸುತ್ತದೆ. ಪ್ರಾ.ಸಾ.2 ವೈದ್ಯರು, ಶೇ.48ರಂತೆ ಇಡೀ ದೇಹಕ್ಕೆ ಉಂಟಾದ ಅಂಗವೈಕಲ್ಯತೆಯನ್ನು ನಿರ್ಧರಿಸಿದ್ದಾರೆ.

9. ಗಾಯಗಳ ಸಂಖ್ಯೆ ಮತ್ತು ಗಾಯಗಳ ತೀವ್ರತೆಯನ್ನು ಪರಿಗಣಿಸಿದ್ದು, ನೋವು ಮತ್ತು ಯಾತನೆಗಳ ಸಲುವಾಗಿ ನ್ಯಾಯಾಧಿಕರಣವು 40,000/– ರೂಪಾಯಿಗಳನ್ನು ನೀಡಿರುವುದು ತಕ್ಕಷ್ಟಿಲ್ಲವೆಂದು, ಈ ಶೀರ್ಷಿಕೆಯ ಅಡಿಯಲ್ಲಿ 60,000/– ರೂ.ಗಳ ಐತೀರ್ಪು ನೀಡಲಾಗಿದೆ.

10. ವೈದ್ಯಕೀಯ ವೆಚ್ಚಗಳ ಸಲುವಾಗಿ ನ್ಯಾಯಾಧಿಕರಣವು ನೀಡಿದ 50,000/– ರೂಪಾಯಿಗಳಿಗೆ ಸಂಬಂಧಪಟ್ಟಂತೆ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ.

11. ಕ್ಲೇಮುದಾರನು, ಬಹುತೇಕ ಒಂದು ತಿಂಗಳ ಕಾಲ ಒಳರೋಗಿಯಾಗಿದ್ದಾನೆ. ಅದನ್ನು ಪರಿಗಣಿಸಿ, ಆಹಾರ, ನರ್ಸಿಂಗ್ ಮತ್ತು ಸೇವಕ ವೆಚ್ಚಗಳಿಗಾಗಿ ಸ್ವಲ್ಪ ಮೊತ್ತವನ್ನು ನೀಡುವುದು ಅಗತ್ಯವಾಗಿದೆ. ಆದ್ದರಿಂದ, 15,000/– ರೂಪಾಯಿಗಳ ಮೊತ್ತವನ್ನು ಆನುಷಂಗಿಕ ವೆಚ್ಚಗಳ ಸಲುವಾಗಿ ನೀಡಲಾಗಿದೆ.

12. ಗಾಯಗಳ ಸ್ವರೂಪವನ್ನು ಪರಿಗಣಿಸಿ, ತಕ್ಕಷ್ಟಿಲ್ಲದ್ದರಿಂದ, ಸೌಕರ್ಯಗಳ ನಷ್ಟದ ಸಲುವಾಗಿ ನ್ಯಾಯಾಧಿಕರಣವು ನೀಡಿರುವ 15,000/–ರೂಪಾಯಿಗಳ ಐತೀರ್ಪು ಬದಲಿಗೆ 45,000/– ರೂಪಾಯಿಗಳ ಮೊತ್ತವನ್ನು ಈ ಶೀರ್ಷಿಕೆಯ ಅಡಿಯಲ್ಲಿ ಐತೀರ್ಪು ನೀಡಲಾಗಿದೆ.

13. ನ್ಯಾಯಾಧಿಕರಣವು, ಪ್ರತಿ ತಿಂಗಳು 3,500/– ರೂಪಾಯಿಗಳಂತೆ ಕ್ಲೇಮುದಾರನ ಆದಾಯವನ್ನು ನಿರ್ಧರಿಸಿದೆ ಮತ್ತು 8 ತಿಂಗಳಂತೆ ಚಿಕಿತ್ಸೆಯ ಅವಧಿಯನ್ನು ಪರಿಗಣಿಸಿದ್ದು, ಹೇಳಲಾದ ಅವಧಿಯವರೆಗೆ ಆದಾಯದ ಅವಧಿಯ ನಷ್ಟದ ಸಲುವಾಗಿ 28,000/– ರೂಪಾಯಿಗಳ ಐತೀರ್ಪನ್ನು ನೀಡಲಾಗಿದೆ. ಕ್ಲೇಮುದಾರನು, ಲಾರಿಯಲ್ಲಿ ಕ್ಲೀನರ್‌ನಾಗಿದ್ದಾನೆ. ಅಪಘಾತವು, 2008ನೇ ವರ್ಷದಲ್ಲಿ ನಡೆದಿದೆ. ಕ್ಲೇಮುದಾರನ ಆದಾಯವನ್ನು, ವಿಶಾಲವಾದ ಪರಿಭಾವನೆಯ ಮೇಲೆ ನಿರ್ಧರಿಸಲಾಗಿದೆ. ಅವನು ಕೂಲಿಯಾಗಿದ್ದು, 2008 ಅಪಘಾತ ವರ್ಷವಾಗಿದೆ ಎಂಬುದನ್ನು ಪರಿಗಣಿಸಲಾಗಿದೆ ಮತ್ತು ಅವನು, ಬೆಂಗಳೂರಿನಲ್ಲಿ ಕ್ಲೀನರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಅವನ ಆದಾಯವನ್ನು ಪ್ರತಿತಿಂಗಳು 4,000/– ರೂಪಾಯಿಗಳಂತೆ ನಿರ್ಧರಿಸಲಾಗುವುದು. ಅದಕ್ಕನುಸಾರವಾಗಿ, 32,000/– ರೂಪಾಯಿಗಳ ಮೊತ್ತವನ್ನು ಈ ಶೀರ್ಷಿಕೆಯ ಅಡಿಯಲ್ಲಿ ಐತೀರ್ಪು ನೀಡಲಾಗಿದೆ.

14. ವೈದ್ಯರು, ಗಾಯಗಳ ಸ್ವರೂಪವನ್ನು ಪರಿಗಣಿಸಿ ಶೇ.48ರಂತೆ ಇಡೀ ದೇಹಕ್ಕೆ ಉಂಟಾದ ಅಂಗವೈಕಲ್ಯತೆಯನ್ನು ನಿರ್ಧರಿಸಿದ್ದು, ನ್ಯಾಯಾಧಿಕರಣವು,

ಭವಿಷ್ಯತ್ತಿನ ಗಳಿಕೆಯ ನಷ್ಟವನ್ನು ಲೆಕ್ಕಹಾಕಿ ಶೇ.28ರಂತೆ ಅಂಗವೈಕಲ್ಯತೆಯನ್ನು ತೆಗೆದುಕೊಂಡಿದೆ ಮತ್ತು ಅದು ಸರಿಯಾಗಿರುವಂತೆ ಕಂಡು ಬಂದಿದೆ. '16'ರ ಗುಣಕವು ವಯಸ್ಸಿನ ಆಧಾರದ ಮೇಲೆ ಅನ್ವಯಿಸುವುದು. ಆದ್ದರಿಂದ, ಭವಿಷ್ಯತ್ತಿನ ಗಳಿಕೆಯ ನಷ್ಟವನ್ನು, 2,15,040/– ರೂಪಾಯಿಗಳಿಗೆ ಲೆಕ್ಕಹಾಕಲಾಗಿದೆ (4000 x 28% x 12 x 16).

15. ಭವಿಷ್ಯತ್ತಿನ ವೈದ್ಯಕೀಯ ವೆಚ್ಚಗಳ ಶೀರ್ಷಿಕೆಯ ಅಡಿಯಲ್ಲಿ ಯಾವುದೇ ಮೊತ್ತವನ್ನು ನೀಡಿರುವುದಿಲ್ಲ. ಕ್ಲೇಮುದಾರನು, ಆಂತರಿಕ ಸ್ಥಿರತೆಗೆ ಒಳಗಾಗಿದ್ದು, 30,000/– ರೂಪಾಯಿಗಳ ಮೊತ್ತವನ್ನು ಈ ಶೀರ್ಷಿಕೆಯ ಅಡಿಯಲ್ಲಿ ಐತೀರ್ಪು ನೀಡಲಾಗಿದ್ದು, ಇತರೇ ಉಪಕರಣಗಳನ್ನು ಸೇರಿಸುವ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದಾನೆಂಬ ಸಂಗತಿಯನ್ನು ಪರಿಗಣಿಸಲಾಗಿದೆ.

16. ಹೀಗಾಗಿ, ಕ್ಲೇಮುದಾರನು ಈ ಮುಂದಿನ ಪರಿಹಾರಕ್ಕಾಗಿ ಹಕ್ಕುಳ್ಳವನಾಗಿರುತ್ತಾನೆ:

| **ಶೀರ್ಷಿಕೆ** | **ರೂಪಾಯಿಗಳು** |
|---|---|
| ನೋವು ಮತ್ತು ಯಾತನೆಗಳಿಗಾಗಿ | 60,000/– |
| ವೈದ್ಯಕೀಯ ವೆಚ್ಚಗಳಿಗಾಗಿ | 50,000/– |
| ಆನುಷಂಗಿಕ ವೆಚ್ಚಗಳಿಗಾಗಿ | 15,000/– |
| ಸೌಕರ್ಯಗಳ ನಷ್ಟದ ಸಲುವಾಗಿ | 45,000/– |
| ಹೇಳಲಾದ ಅವಧಿಯಲ್ಲಿ ಆದಾಯದ ನಷ್ಟದ ಸಲುವಾಗಿ | 32,000/– |
| ಭವಿಷ್ಯತ್ತಿನ ಆದಾಯದ ನಷ್ಟದ ಸಲುವಾಗಿ | 2,15,040/– |
| ಭವಿಷ್ಯತ್ತಿನ ವೈದ್ಯಕೀಯ ವೆಚ್ಚಗಳ ಸಲುವಾಗಿ | 30,000/– |
| **ಒಟ್ಟು** | **4,47,040/–** |
| ಕಡಿತ: ನ್ಯಾಯಾಧಿಕರಣ ಐತೀರ್ಪು ನೀಡಿದ ಪರಿಹಾರ | 3,24,400/– |
| **ಬಾಕಿ** | **1,22,640/–** |

17. ವಿಮಾದಾರ ಮೆ॥ ಬಜಾಜ್ ಅಲಿಯನ್ಸ್ ಜನರಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ಪರವಾಗಿ ಮಾನ್ಯ ನ್ಯಾಯವಾದಿಯಾದ ಶ್ರೀ ಎ.ಎನ್. ಕೃಷ್ಣಸ್ವಾಮಿರವರು, ವಿಮಾದಾರ ಕಂಪನಿಯ ಹೊಣೆಯನ್ನು ಮೋಟಾರು ವಾಹನ ಅಧಿನಿಯಮದ 147ನೇ ಪ್ರಕರಣದ ಪರಂತುಕದಲ್ಲಿ ಕಂಡು ಬರುವ ಹೊಣೆಗೆ ನಿರ್ಬಂಧಿಸಲಾಗಿದೆಯೆಂದು ವಾದಿಸಿದ್ದಾರೆ. ಅವರು, ನ್ಯಾಯಾಧಿಕರಣದ 14ನೇ ಪ್ಯಾರಾಗ್ರಾಫ್‌ನಲ್ಲಿ ಒಪ್ಪಿಕೊಂಡಿರುವ ತಿದ್ದುಪಡಿಗೆ ಸಹ ಈ ನ್ಯಾಯಾಲಯದ ಗಮನವನ್ನು ಸೆಳೆದಿದ್ದು ಅಂದರೆ, ಮೋಟಾರು ವಾಹನ ಅಧಿನಿಯಮದ 147ನೇ ಪ್ರಕರಣದ ಪರಂತುಕದ ಪ್ರಕಾರ ವಿಮಾದಾರನ ಹೊಣೆಯನ್ನು ನಿರ್ಬಂಧಿಸುವುದಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಲಾಗಿದೆ ಎಂಬುದನ್ನು ಎತ್ತಿ ತೋರಿಸಿದ್ದಾರೆ. 2ನೇ ಪ್ರತ್ಯರ್ಜಿದಾರನ ಲಿಖಿತ ಹೇಳಿಕೆಯನ್ನು 14ನೇ ಪ್ಯಾರಾಗ್ರಾಫ್‌ನಲ್ಲಿ ದಿನಾಂಕ 9.4.2009ರಂದು ಒಪ್ಪಿಕೊಂಡಿರುವ ತಿದ್ದುಪಡಿಯಾಗಿದೆ. ಅದು, ಈ ಮುಂದಿನಂತಿದೆ:

> *"14. ಮೇಲಿನ ವಾದಗಳಿಗೆ ಬಾಧಕವಾಗದಂತೆ, ಕ್ಲೇಮುದಾರನು ಕ್ಲೇಮು ಮಾಡಿದ ಬಡ್ಡಿ ಮತ್ತು ವೆಚ್ಚಗಳೊಂದಿಗೆ 1,00,000/– ರೂಪಾಯಿಗಳ ಮೊತ್ತವು, ಅತ್ಯಧಿಕವಾಗಿದ್ದು, ಮಿತಿ ಮೀರಿದೆ ಹಾಗೂ ಉತ್ಪ್ರೇಕ್ಷೆಯಾಗಿದೆ ಮತ್ತು ಸದರಿ ಮೊತ್ತ ಅಥವಾ ಅವನ ಕಡೆಯಿಂದ ಸಂದಾಯ ಮಾಡುವುದಕ್ಕೆ ಈ ಪ್ರತ್ಯರ್ಜಿದಾರನು ಹೊಣೆಗಾರನಾಗಿರುವುದಿಲ್ಲವೆಂದು ಪ್ರತ್ಯರ್ಜಿದಾರನು ವಾದವನ್ನು ಮಂಡಿಸಿದ್ದಾನೆ. ಆರ್ಥಿಕ ಹಾನಿಯಲ್ಲದರ ಅತ್ಯಲ್ಪ ಬಡ್ಡಿಯ ಯಾವುದೇ ಪರಿಹಾರಕ್ಕೆ ಅರ್ಜಿದಾರನು ಹಕ್ಕುಳ್ಳವನಾಗಿರುವುದಿಲ್ಲ. ಈ ಹಿಂದಿನ ವಾದಗಳಿಗೆ ಬಾಧಕವಾಗದಂತೆ ಮತ್ತು ಕೆಲಸಗಾರರ ಅಧಿನಿಯಮದ ಪ್ರಕಾರ ಯಾರೇ ಪ್ರತ್ಯರ್ಜಿದಾರನಾಗಿದ್ದಲ್ಲಿ ಹೊಣೆಯಾಗುತ್ತಾನೆಂದು ವಾದ ಮಂಡಿಸಲಾಗಿದೆ".*

18. ವಿಮಾದಾರನ ಪ್ರಕಾರ, ವಿಮಾದಾರನು, ಕೆಲಸಗಾರರ ಅಧಿನಿಯಮದ 3 ಮತ್ತು 4ನೇ ಪ್ರಕರಣಗಳನ್ನು ಅವಲೋಕಿಸಿದ್ದು, 1,15,871.28/– ರೂಪಾಯಿಗಳ

ಮೊತ್ತವನ್ನು ಸಂದಾಯ ಮಾಡಲು ಹೊಣೆಯಾಗುತ್ತಾನೆ ಮತ್ತು ಅದನ್ನು ಈ ಮುಂದಿನಂತೆ ಲೆಕ್ಕಹಾಕಲಾಗಿದೆ:

ಕ್ಲೇಮುದಾರನ ಆದಾಯವನ್ನು ಪ್ರತಿ ತಿಂಗಳು 3,500/- ರೂ.ಗಳಂತೆ ತೆಗೆದುಕೊಳ್ಳಲಾಗಿದೆ.

3,500/- ರೂಪಾಯಿಗಳನ್ನು ಶೇ.60ರಂತೆ = 2100
2,100/- ರೂಪಾಯಿಗಳನ್ನು ಶೇ.28 ರಂತೆ = 588
588 x 197.0 (ಅಂಶ) = 1,15,871.28/- ರೂಪಾಯಿಗಳು

19. ಹಾಗಾಗಿ, ಈ ನ್ಯಾಯಾಲಯ, ಪ್ರತಿತಿಂಗಳು 4,000/- ರೂಪಾಯಿಗಳಂತೆ ಕ್ಲೇಮುದಾರನ ಆದಾಯವನ್ನು ನಿರ್ಧರಿಸಿದ್ದು, ವಿಮಾದಾರನು, ಕೆಲಸಗಾರರ ಅಧಿನಿಯಮದ 3 ಮತ್ತು 4ನೇ ಪ್ರಕರಣವನ್ನು ಅವಲೋಕಿಸಿ, 1,32,424/- ರೂಪಾಯಿಗಳ ಮೊತ್ತವನ್ನು ಪಾವತಿಸಲು ಹೊಣೆಯಾಗಿದ್ದಾನೆ ಮತ್ತು ಅದನ್ನು ಈ ಮುಂದಿನಂತೆ ಲೆಕ್ಕಹಾಕಲಾಗಿದೆ:

ಕ್ಲೇಮುದಾರನ ಆದಾಯವನ್ನು ಪ್ರತಿ ತಿಂಗಳು 4,000/- ರೂ.ಗಳಂತೆ ತೆಗೆದುಕೊಳ್ಳಲಾಗಿದೆ.

4,000/- ರೂಪಾಯಿಗಳನ್ನು ಶೇ.60ರಂತೆ = 2400
2,400/- ರೂಪಾಯಿಗಳನ್ನು ಶೇ.28 ರಂತೆ = 672
672 x 197.06 (ಅಂಶ) = 1,32,424/- ರೂಪಾಯಿಗಳು

20. ವಿಮಾದಾರನು 1,32,424/- ರೂ.ಗಳ ಮೊತ್ತವನ್ನು ಮಾತ್ರ ಪಾವತಿಸುವುದಕ್ಕೆ ಹೊಣೆಗಾರನಾಗಿರುತ್ತಾನೆಂದು ಅದರ ಮೇಲೆ ಯಾವುದೇ

ಇಲ್ಲವೆಂದು ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಭಾವಾವೇಶವಾಗಿ ವಾದಿಸಿದ್ದಾರೆ ಮತ್ತು ಅವನು, ನಿಶಾನೆ ಆರ್.1 ವಿಮಾ ಪಾಲಿಸಿಯ ಮೇಲೆ ಅವಲಂಬಿತನಾಗಿದ್ದಾನೆ ಒಪ್ಪಿಕೊಂಡ ಹಾಗೆ ವಿಮಾ ಪಾಲಿಸಿಯು, ಅಪಘಾತದ ದಿನಾಂಕದಂದು ಸಿಂಧುವಾಗಿದೆ. ಇದಲ್ಲದೇ ವಿಮಾದಾರನು, ಮೋಟಾರು ವಾಹನ ಅಧಿನಿಯಮದ 147ನೇ ಪ್ರಕರಣದ ಪರಂತುಕದ ಪ್ರಕಾರ 1,32,424/– ರೂಪಾಯಿಗಳನ್ನು ಪಾವತಿಸುವುದಕ್ಕೆ ಹೊಣೆಗಾರನಾಗಿರುತ್ತಾನೆ ಮತ್ತು ಯಾವುದೇ ಮೊತ್ತದ ಹೆಚ್ಚುವರಿಯಾಗಿ ಪಾವತಿಸಿದ್ದಲ್ಲಿ, ವಿಮಾದಾರನು, ಅಪರಾಧ ವಾಹನದ ಮಾಲೀಕನಿಂದ ಅದನ್ನು ವಸೂಲಿ ಮಾಡಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆಂದು ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ.

21. ***ರಾಷ್ಟ್ರೀಯ ವಿಮಾ ಕಂಪನಿ ಲಿಮಿಟೆಡ್ –ವಿರುದ್ಧ– ಪ್ರೇಮಾಬಾಯಿ ಪಟೇಲ್ ಮತ್ತು ಇತರರು*** [1], ಪ್ರಕರಣದಲ್ಲಿ ಸನ್ಮಾನ್ಯ ಮೂವರು ನ್ಯಾಯಾಧೀಶರನ್ನೊಳಗೊಂಡ ಪೀಠದಿಂದ ನೀಡಲಾದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಮೇಲೆ ಅವಲಂಬಿತರಾಗಿದ್ದು, ಸಂಪೂರ್ಣವಾಗಿ ಉದ್ಯೋಗಿಯ ಕಾನೂನು ಹೊಣೆಯನ್ನೊಳಗೊಂಡು ವಿಮೆ ಮಾಡುವುದರಿಂದ ಹೆಚ್ಚುವರಿ ಪ್ರೀಮಿಯಂನ್ನು ಸಂಗ್ರಹ ಮಾಡಿರುವುದಿಲ್ಲ ಮತ್ತು ಆದ್ದರಿಂದ ಹೊಣೆಯು, ಸದರಿ ತೀರ್ಮಾನದ 15ನೇ ಪ್ಯಾರಾಗ್ರಾಫ್‌ನಲ್ಲಿ ಕೆಲಸಗಾರರ ಅಧಿನಿಯಮದ ನಿಬಂಧನೆಗಳಲ್ಲಿ ನಿರ್ಬಂಧಿಸಬಹುದಾಗಿದ್ದು, ಸುಸಂಬದ್ಧವಾಗಿದೆ ಮತ್ತು ಕೆಳಗಿನಂತೆ ಉದ್ಧೃತವಾಗಿದೆಯೆಂದು ಶ್ರೀ ಎ.ಎನ್. ಕೃಷ್ಣಸ್ವಾಮಿ ರವರು ವಾದಿಸಿದ್ದಾರೆ.

> 15. ಈ ಹಿಂದೆ ಹೇಳಿದ ತೀರ್ಮಾನವನ್ನು, ಮೋಟಾರು ವಾಹನಗಳ ಅಧಿನಿಯಮ, 1939ರ 95(2)ನೇ ಪ್ರಕರಣದ ಮೇಲೆ ನೀಡಲಾಗಿದ್ದರೂ, ಆದರೆ ಅದರಲ್ಲಿನ ಮೂಲ ಸಾರಭೂತ ನಿಯಮವು ಸಹ ಪೂರ್ಣವಾಗಿ ಅನ್ವಯಿಸುತ್ತದೆ. 147(1)(ಬಿ)

1. 2005 ಸನ್ಯಾಪ್ರ 172

ಪ್ರಕರಣದ ಪರಂತುಕ (1)ರ (ಎ) ಅಥವಾ (ಬಿ) ಅಥವಾ (ಸಿ) ಉಪಖಂಡಗಳಲ್ಲಿ ವಿವರಿಸಲಾದಂತೆ ಕೆಲಸಗಾರರ ಅಧಿನಿಯಮದ ಅಡಿಯಲ್ಲಿ ನಿರ್ಬಂಧಿಸತಕ್ಕದ್ದಲ್ಲ ಆದರೆ ಹೆಚ್ಚು ಅಥವಾ ಅಪರಿಮಿತವಾಗಿ, ಹೆಚ್ಚುವರಿ ಪ್ರೀಮಿಯಂ ಮತ್ತು ಪಾಲಿಸಿಯನ್ನು ಸಂದಾಯ ಮಾಡುವುದರ ಮೂಲಕ ಅಂಥ ಪಾಲಿಸಿಯನ್ನು ಅವನು ತೆಗೆದುಕೊಳ್ಳತಕ್ಕದ್ದು ಎಂಬುದು ಸ್ಪಷ್ಟವಾಗಿದ್ದು ಹಾಗೂ ಪರಿಣಾಮಕಾರಿಯಾದ ಖಂಡವನ್ನು ಸಹ ಒಳಗೊಂಡಿರತಕ್ಕದ್ದು ಎಂಬುದು ಸ್ಪಷ್ಟವಾಗುತ್ತದೆ. ಆದಾಗ್ಯೂ "ಅಧಿನಿಯಮದ ಹೊಣೆಯ ಈ ಪಾಲಿಸಿಯು" ಅಥವಾ "ಅಧಿನಿಯಮ ಹೊಣೆ" ಪಾಲಿಸಿ ನಮೂದುಗಳು, ಈ ಹಿಂದೆ ಹೇಳಿದಂತೆ ನೌಕರರಾಗಿರುವುದರಿಂದ ವಿಮಾ ಕಂಪನಿಯ ಹೊಣೆಯು, ಅಪರಿಮಿತವಾಗಿರುವುದಿಲ್ಲ ಆದರೆ ಕೆಲಸಗಾರರ ಅಧಿನಿಯಮದ ಅಡಿಯಲ್ಲಿ ಉದ್ಭವಿಸಿದೆ ಎಂಬುದು ಪರಿಮಿತವಾಗಿದೆ.

22. ತದ್ವಿರುದ್ಧವಾಗಿ, ಸದರಿ ತೀರ್ಮಾನವು, ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯಿಸುವುದಿಲ್ಲ ಮತ್ತು ಅದು ಆ ಸಂಗತಿಗಳಿಗೆ ವಿಭಿನ್ನವಾಗಿದೆಯೆಂದು ಕ್ಲೇಮುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಗೋಪಾಲಕೃಷ್ಣರವರು ವಾದಿಸಿದ್ದಾರೆ. ಮೋಟಾರು ವಾಹನ ಅಧಿನಿಯಮದ 149(5)ನೇ ಪ್ರಕರಣವನ್ನು ಸ್ಪಷ್ಟವಾಗಿ ಓದಿದ ಮೇಲೆ, ವಿಮಾದಾರನು, ಕ್ಲೇಮುದಾರನ ಪೂರ್ಣವ್ಯಾಪ್ತಿಗೆ ಪ್ರಾರಂಭಕವಾಗಿ ನಷ್ಟಭರ್ತಿ ಮಾಡುವುದು ಹೊಣೆಯಾಗಿದೆ ಮತ್ತು ಕೆಲಸಗಾರರ ಅಧಿನಿಯಮದ ಅಡಿಯಲ್ಲಿನ ಹೊಣೆಯು ಅಧಿಕವಾಗಿದ್ದಲ್ಲಿ ಐತೀರ್ಪು ನೀಡಲಾದ ಮಾಲೀಕನ ಪರಿಹಾರದಿಂದ ಅದನ್ನು ತರುವಾಯ ವಸೂಲಿ ಮಾಡಿಕೊಳ್ಳುವುದು ಎಂಬುದು ಸ್ಪಷ್ಟವಾಗಿದೆಯೆಂದು ನಿವೇದಿಸಿದ್ದಾರೆ.

23. ವಿಮಾದಾರನ ಪರವಾಗಿ ಹಾಜರಾದ ಶ್ರೀ ಕೃಷ್ಣಸ್ವಾಮಿರವರು, ಪ್ರಶ್ನಿತ ಅಪರಾಧ ವಾಹನಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಈ ನ್ಯಾಯಾಲಯದ

ಗಮನಕ್ಕೆ ತಂದಿದ್ದಾರೆ ಮತ್ತು ಸಂಬಂಧಿತ ಸ್ಟಾಂಡರ್ಡ್ ನಮೂನೆಯನ್ನು ಅದಕ್ಕೆ ಲಗತ್ತಿಸಲಾಗಿದೆ. ನಿಗದಿತ ಪ್ರೀಮಿಯಂನ್ನು ಪರಿಶೀಲಿಸಿದ ಮೇಲೆ, 6,090/– ರೂಪಾಯಿಗಳ ಮೊತ್ತವನ್ನು ಮೂಲ ಮೂರನೇ ಪಕ್ಷಕಾರನ ಹೊಣೆಯಾಗಿ ಸಂಗ್ರಹಿಸಲಾಗಿದೆ ಎಂಬುದು ಸಾಕ್ಷ್ಯವಾಗಿದೆ ಮತ್ತು ಮಾಲೀಕ / ಚಾಲಕನ ವ್ಯಾಪ್ತಿಯನ್ನು 2,00,000/– ರೂಪಾಯಿಗಳಿಗೆ ಮಾತ್ರ ವಿಸ್ತರಿಸಲಾಗಿದ್ದು, ವೈಯಕ್ತಿಕ ಅಪಘಾತಕ್ಕಾಗಿ 100 ರೂ.ಗಳನ್ನು ನೀಡಲಾಗಿದೆ. ಹೀಗಾಗಿ 6,190/– ಗಳನ್ನು ಪ್ರೀಮಿಂಯಾಗಿ ವಸೂಲಿ ಮಾಡಿಕೊಳ್ಳಲಾಗಿದೆ.

24. ***ಪ್ರೇಮಾಬಾಯಿ*** ಪ್ರಕರಣದಲ್ಲಿ ನೀಡಲಾದ ತೀರ್ಮಾನದ 15ನೇ ಪ್ಯಾರಾಗ್ರಾಫ್ ಹಿನ್ನೆಲೆಯಲ್ಲಿ ನಿಶಾನೆ. ಆರ್.1 ಒಳಾಂಶಗಳನ್ನು ಓದಿದ ಮೇಲೆ, ವಿಮಾ ಪ್ರೀಮಿಯಂನಲ್ಲಿ, ಸಂಪೂರ್ಣವಾದ ಕಾನೂನು ಹೊಣೆ ಒಳಗೊಂಡಿರುವುದು ಕಂಡು ಬರುವುದಿಲ್ಲ: ಈ ನ್ಯಾಯಾಲಯದ ಮುಂದೆ, ಕ್ಲೇಮುದಾರರ ಪರವಾಗಿ ವಾದ ಮಂಡಿಸಿರುವ ಮಾನ್ಯ ನ್ಯಾಯವಾದಿ ಶ್ರೀ ಗೋಪಾಲಕೃಷ್ಣ ಇವರು ***ಪ್ರೇಮಾಬಾಯಿ*** ಮೊಕದ್ದಮೆಯಲ್ಲಿ ನೀಡಲಾಗಿರುವ ನಿರ್ಣಯದಂತೆ ಆ ಪಾಲಿಸಿಯನ್ನು ನೀಡಲಾಗಿರುವುದು: (ಎ) ಅಧಿನಿಯಮದ ಹೊಣೆಯ ಪಾಲಿಸಿ, ಅಥವಾ (ಬಿ) ಅಧಿನಿಯಮ ಹೊಣೆ ಮತ್ತು ಆದ್ದರಿಂದ, ಸದರಿ ತೀರ್ಮಾನವು, ವಿಭಿನ್ನವಾಗಿದೆ, ಈ ನ್ಯಾಯಾಲಯ, ಶ್ರೀ ಗೋಪಾಲಕೃಷ್ಣರವರ ವಾದವನ್ನು ಅಂಗೀಕರಿಸಲು ಅಸಮರ್ಥವಾಗಿದೆ.

25. ***ಪ್ರೇಮಾಬಾಯಿ*** ಪ್ರಕರಣದ ನಿರ್ಣಯದಲ್ಲಿನ 15ನೇ ಪ್ಯಾರಾಗ್ರಾಫ್‌ನ ಪ್ರಾರಂಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಮಾನ್ಯ ನ್ಯಾಯಮೂರ್ತಿಗಳು, 1939ನೇ ಅಧಿನಿಯಮದ ನಿರಸನಗೊಳಿಸಲಾದ 92(2)ನೇ ಪ್ರಕರಣವನ್ನು ಪರಿಗಣಿಸಲಾಗಿದ್ದರೂ, ಅದೇ ನಿಯಮವು ಸಹ 1988ರ ಮೋಟಾರು ವಾಹನ ಅಧಿನಿಯಮಕ್ಕೆ ಅನ್ವಯಿಸುತ್ತದೆ. ಮೋಟಾರು ವಾಹನ ಅಧಿನಿಯಮದ 147(1)ನೇ ಪ್ರಕರಣದ (ಎ), (ಬಿ) ಮತ್ತು (ಸಿ) ಉಪ–ಪ್ರಕರಣಗಳು, ಕೆಲಸಗಾರರ ಪರಿಹಾರ ಅಧಿನಿಯಮದ ಉಪಬಂಧಗಳ

ಹಿನ್ನೆಲೆಯಲ್ಲಿ ದೀರ್ಘವಾಗಿ ವ್ಯವಹರಿಸುತ್ತದೆ. ಮೋಟಾರು ವಾಹನ ಅಧಿನಿಯಮ, 1988ರ 147(1)ನೇ ಪ್ರಕರಣದ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ವಿವರಿಸಲಾದ ಅಂಥ ನೌಕರರಿಗೆ ಮರಣ ಅಥವಾ ದೇಹದ ಗಾಯದ ಸಂಬಂಧದಲ್ಲಿ ವಿಮಾ ಕಂಪನಿಯ ವಾಹನ ಕ್ಲೇಮುಗಳ ಹೊಣೆಯ ಮಾಲೀಕನು, ಪರಿಣಾಮಕಾರಿಯಾಗಿ ಈ ಖಂಡಗಳನ್ನೊಳಗೊಂಡು ಸಹ, ಹೆಚ್ಚಿನ ಪ್ರೀಮಿಯಂ ಮತ್ತು ಪಾಲಿಸಿಯ ಸಂದಾಯವನ್ನು ಮಾಡುವುದರ ಮೂಲಕ ಅಂಥ ಪಾಲಿಸಿಯನ್ನು ಅವನು ತೆಗೆದುಕೊಳ್ಳತಕ್ಕದ್ದೆಂದು ಹೇಳಲಾಗಿದೆ.

26. ***ಶ್ರೀಮತಿ ಭೀಮವ್ವ ಮತ್ತು ಇತರರು ವಿರುದ್ಧ – ಶಂಕರ್ ಆಲಿಯಾಸ್ ಆಧ್ಯಾ ಮತ್ತು ಇತರರು***[2], ಪ್ರಕರಣದಲ್ಲಿ ನೀಡಿದ ಈ ನ್ಯಾಯಾಲಯದ ಪೂರ್ಣ ಪೀಠದ ತೀರ್ಮಾನವನ್ನು ಉಲ್ಲೇಖಿಸಿದ್ದು ಅದನ್ನು ಉಪಯೋಗಿಸಿಕೊಳ್ಳಲಾಗಿದೆ. ಸದರಿ ತೀರ್ಮಾನದಲ್ಲಿರುವಂತೆ ಅಂತಿಮವಾಗಿ ಅಭಿಪ್ರಾಯಪಟ್ಟಿರುವುದನ್ನು ಈ ಪರಂತುಕವು ಸ್ಪಷ್ಟವಾಗಿ ತಿಳಿಸುತ್ತದೆ.

> "ಮೋಟಾರು ವಾಹನಗಳ ಅಧಿನಿಯಮ, 1988ರ 167ನೇ ಪ್ರಕರಣದ, ಸಂಗತಿಗಳ ಹೊರತಾಗಿಯೂ ಇದ್ದರೂ ಎಂಬ ಖಂಡದೊಂದಿಗೆ ಪ್ರಾರಂಭಿಸಲಾಗಿದೆಂಬುದು ಸಂಗತಿಯಾಗಿರುವುದಿಲ್ಲ ಮತ್ತು ಕೆಲಸಗಾರರ ಅಧಿನಿಯಮ ಅಥವಾ ಮೋಟಾರು ವಾಹನ ಅಧಿನಿಯಮ, 1998ರ ಅಡಿಯಲ್ಲಿ ವ್ಯಕ್ತಿಗೆ ಕ್ಲೇಮು ಪರಿಹಾರ ನೀಡಲಾಗಿದೆ. ವಿಮಾದಾರನು, ಆ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗಗಳಿಗೆ ನಷ್ಟಭರ್ತಿ ಮಾಡಿರುವುದಕ್ಕೆ ಹೊಣೆಯಾಗಿರತಕ್ಕದ್ದು ಎಂಬುದನ್ನು ಅದನ್ನು ಪರಂತುಕದಲ್ಲಿ ಸ್ಪಷ್ಟವಾಗಿ ಮಾಡಲಾಗಿದೆ. ಹೊಣೆಯ ಸಂಬಂಧದಲ್ಲಿ ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಲಾದ ವಿಮಾ ಕಂಪನಿಯ ಹೊಣೆಯುನ್ನು,

2. ಐಎಲ್ಆರ್ 2003 ಕೆಎಆರ್ 3538

> ಕೆಲಸಗಾರರ ಅಧಿನಿಯಮದ ಅಡಿಯಲ್ಲಿ ಉದ್ಭವಿಸಿದ, ಹೊಣೆಗೆ ಮಿತಿಯಾಗಿರತಕ್ಕದ್ದು, ಆದರೆ ಅಂಥ ಹೊಣೆಯನ್ನು ಜಾರಿಗೊಳಿಸಬಹುದು. ಮೋಟಾರು ವಾಹನಗಳ ಅಧಿನಿಯಮದ ಅಡಿಯಲ್ಲಿ ಸಹ, ಕೆಲಸಗಾರರ ಪರಿಹಾರ ಅಧಿನಿಯಮದ ಅಡಿಯಲ್ಲಿ ನ್ಯಾಯ ನಿರ್ಣಯ ಮಾಡಿರುವುದಿಲ್ಲ.

ಆದ್ದರಿಂದ, ಈ ನ್ಯಾಯಾಲಯದ ಪೂರ್ಣ ಪೀಠ ನೀಡಿದ ತೀರ್ಮಾನಗಳನ್ನು ಓದಿಕೊಳ್ಳಲಾಗಿದೆ ಮತ್ತು ***ಪ್ರೇಮಾಬಾಯಿ*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ವಿಮೆ ಮಾಡಲಾದ ಸಂಪೂರ್ಣ ಕಾನೂನು ಹೊಣೆಯನ್ನು ಒಳಗೊಂಡು ಹೆಚ್ಚಿನ ಪ್ರೀಮಿಯಂ ಅನ್ನು ಸಂಗ್ರಹಿಸಿದ ಹಿನ್ನೆಲೆಯಲ್ಲಿ ವಿಮಾ ಕಂಪನಿಯ ಹೊಣೆಯನ್ನು ಅಂದರೆ, ಎದುರು ಆಕ್ಷೇಪಣೆದಾರರಿಗೆ, 1,32,424/– ರೂಪಾಯಿಗಳಿಗೆ ವಿಸ್ತರಿಸಿ ಕೆಲಸಗಾರರ ಅಧಿನಿಯಮದ ನಿಬಂಧನೆಗಳಲ್ಲಿರುವಂತೆ ಮಿತಿಗೊಳಿಸಲಾಗಿದೆ.

27. ಕೆಲಸಗಾರರ ಅಧಿನಿಯಮದ ನಿಬಂಧನೆಗಳಲ್ಲಿರುವಂತೆ, ಕ್ಲೇಮುದಾರರು ಅಪಘಾತದ ದಿನಾಂಕದಿಂದ ಅದನ್ನು ಠೇವಣಿಯಿಡುವವರೆಗೆ ಒಂದು ತಿಂಗಳ ತರುವಾಯ ಪರಿಹಾರವು ವಾರ್ಷಿಕ ಶೇ.12 ರ ಬಡ್ಡಿಗೆ ಹಕ್ಕುಳ್ಳವರಾಗಿರುತ್ತಾರೆ. ವಿಮಾದಾರನು, ನ್ಯಾಯಾಧಿಕರಣ ನಿರ್ಧರಿಸಿದ ಇಡೀ ಮೊತ್ತವನ್ನು ಠೇವಣಿಯಿಡುವುದರ ಮೂಲಕ ಈಗಾಗಲೇ ಈ ಐತೀರ್ಪಿನ ಬಗ್ಗೆ ತೃಪ್ತಿಕರವಾಗಿದ್ದಾನೆ. ಆದ್ದರಿಂದ, ವಿಮಾ ಕಂಪನಿ ಅಂದರೆ, ಮೆ॥ ಬಜಾಜ್ ಅಲಿಯನ್ಸ್, ಪ್ರಮುಖ ಅಪೀಲಿನಲ್ಲಿ 1ನೇ ಪ್ರತ್ಯರ್ಜಿದಾರ ಮತ್ತು ಎದುರು ಆಕ್ಷೇಪಣೆಗಳಲ್ಲಿ 2ನೇ ಪ್ರತ್ಯರ್ಜಿದಾರರಾದ ಮಾಲೀಕರಿಂದ ಬಡ್ಡಿಯೊಂದಿಗೆ ಕೆಲಸಗಾರರ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬಹುದಾದ ಅಧಿಕ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಹಕ್ಕುಳವರಾಗಿದ್ದಾರೆ.

28. ಸಂಬಂಧಪಟ್ಟ ಎದುರು ಆಕ್ಷೇಪಣೆಗಳಲ್ಲಿ ವಾಹನದ ಮಾಲೀಕನಿಗೆ ನೋಟೀಸ್ ನೀಡಿರುವುದಿಲ್ಲವೆಂದು ಆದ್ದರಿಂದ ಮಾಲೀಕನ ಮೇಲೆ ಯಾವುದೇ

ಮತ್ತಷ್ಟು ಹೊಣೆಯಾಗಲಾರದೆಂದು ಕ್ಲೇಮುದಾರರ ಪ್ರತಿನಿಧಿಯಾದ ಶ್ರೀ ಗೋಪಾಲಕೃಷ್ಣರವರು ವಾದವನ್ನು ಮಂಡಿಸಿದ್ದಾರೆ. ಈ ನ್ಯಾಯಾಲಯ, ಮಾಲೀಕನ ವಾದವನ್ನು ಅಂಗೀಕರಿಸಲಾಗದು, ಪರಿಹಾರದ ಹೆಚ್ಚಳಕ್ಕೆ ಕೋರಿ ಕ್ಲೇಮುದಾರನು ದಾಖಲು ಮಾಡಿದ ಅದೇ ಅಪೀಲಿನಲ್ಲಿ ಈಗಾಗಲೇ ಕ್ರಮಬದ್ಧವಾಗಿ ಜಾರಿಗೊಳಿಸಲಾಗಿದೆ. ಐತೀರ್ಮ/ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಜಂಟಿಯಾಗಿ ಬೇರೆ ಬೇರೆಯಾಗಿ ಮಾಲೀಕ ಮತ್ತು ವಿಮಾದಾರನು ಹೊಣೆಯಾಗಿರುತ್ತಾನೆಂಬುದು ವಾಸ್ತವವಾಗಿದೆ. ವಿಷಯದ ಈ ದೃಷ್ಟಿಯಿಂದ, ಸಿ.ಪಿ.ಸಿ.ಯ ಕ್ರಮಾದೇಶ 41ರ 14ನೇ ನಿಯಮದ ಉಪ–ನಿಯಮ (4)ರ ಹಿನ್ನೆಲೆಯಲ್ಲಿ ಹೆಚ್ಚು ನಿರ್ದಿಷ್ಟವಾಗಿ, ಎದುರು ಆಕ್ಷೇಪಣೆಗಳಲ್ಲಿ ಮಾಲೀಕನಿಗೆ ಹೊಸದಾಗಿ ನೋಟೀಸ್ ಹೊರಡಿಸುವ ಅಗತ್ಯವಿರುವುದಿಲ್ಲ. ಹೀಗಾಗಿ ವಿಮಾದಾರನು ದಾಖಲು ಮಾಡಿದ ಅಪೀಲನ್ನು ಮತ್ತು ಕ್ಲೇಮುದಾರನು ದಾಖಲು ಮಾಡಿದ ಅಪೀಲನ್ನು ಭಾಗಶಃ ಅಂಗೀಕರಿಸಬಹುದಾಗಿದೆ.

29. ಈ ಕಾರಣದಿಂದ, ಈ ಮುಂದಿನ ಆದೇಶವನ್ನು ನಾನು ಮಾಡಿದ್ದೇನೆ.

**ಆಜ್ಞೆ**

ವಿಮಾದಾರನು ದಾಖಲು ಮಾಡಿದ ಅಪೀಲನ್ನು, ಎಂ.ಎಫ್.ಎ. ಸಿಆರ್‌ಓಬಿ 106/2012 ನ್ನು ಅಂಗೀಕರಿಸಲಾಗಿದೆ. ಅದನ್ನು ಠೇವಣಿಯಿಡುವವರೆಗೆ ಅಪಘಾತದ ದಿನಾಂಕದಿಂದ ಒಂದು ತಿಂಗಳ ತರುವಾಯ ಪರಿಹಾರದ ಮೇಲೆ ವಾರ್ಷಿಕ ಶೇ.12ರಂತೆ ಬಡ್ಡಿಯೊಂದಿಗೆ 1,32,424/– ರೂಪಾಯಿಗಳ ಮೊತ್ತಕ್ಕೆ ಅದರ ಹೊಣೆಯನ್ನು ನಿರ್ಬಂಧಿಸಲಾಗಿದೆ. ವಿಮಾದಾರನು, ಮಾಲೀಕ – ಶಿವಕುಮಾರ್ ಅವರಿಂದ ಕೆಲಸಗಾರರ ಅಧಿನಿಯಮದ ಅಡಿಯಲ್ಲಿ ನಿರ್ಧರಿಸಲಾದ ಹೊಣೆಯ ಅಧಿಕವಾದ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

ಕ್ಲೇಮುದಾರನು ದಾಖಲು ಮಾಡಿದ ಅಪೀಲಿನಷ್ಟರ ಮಟ್ಟಿಗೆ, ಸಂಬಂಧಪಟ್ಟಂತೆ, ಪರಿಹಾರವನ್ನು, 4,47,000/– ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಮತ್ತು ಕ್ಲೇಮುದಾರನು, ಮಾಲೀಕನಿಂದ ಆ ಮೊತ್ತವನ್ನು ಪಡೆದುಕೊಳ್ಳುವವರೆಗೆ ಅರ್ಜಿಯ ದಿನಾಂಕದಿಂದ ಅದರ ಮೇಲೆ ವಾರ್ಷಿಕ ಶೇ.6 ಬಡ್ಡಿಯೊಂದಿಗೆ 1,17,000/– ರೂಪಾಯಿಗಳನ್ನು ವಸೂಲಿ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ನ್ಯಾಯಾಧಿಕರಣದ ತೀರ್ಪು ಮತ್ತು ಐತೀರ್ಪನ್ನು, ಈ ಆದೇಶಕ್ಕನುಸಾರವಾಗಿ ಮಾರ್ಪಾಡುಗೊಳಿಸಲಾಗಿದೆ.

ಪಕ್ಷಕಾರರು ತಮ್ಮ ಸ್ವಂತ ವೆಚ್ಚಗಳನ್ನು ಭರಿಸುವುದು.